# ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ. 1180/2019

ಚಾಸಾ : 3 ಪ್ರಾಸಾ : 4

| | |
|---|---|
| ಹೆಸರು | ಮಹದೇವಸ್ವಾಮಿ |
| ತಂದೆ ಹೆಸರು | ಚಿಕ್ಕತಿಮ್ಮಯ್ಯ |
| ವಯಸ್ಸು | 45 |
| ಉದ್ಯೋಗ | ವ್ಯವಸಾಯ |
| ವಿಳಾಸ | ಕಂಚನಹಳ್ಳಿ |

**ದಿಃ 21.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಆರೋಪಿತರು ನನಗೆ ಪರಿಚಯ. ಚಾ.ಸಾ. 1 , 2, 4 ಮತ್ತು 5 ರವರು ನಮ್ಮ ಊರಿನವರು. ನನಗೆ ಈ ಘಟನೆ ಬಗ್ಗೆ ಏನೂ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿನಾಂಕಃ 08.07.2019 ರಾತ್ರಿ 8 ಗಂಟೆ ಸಮಯದಲ್ಲಿ ನಾನು ನನ್ನ ಮನೆಯು ಹತ್ತಿರ ಇರುವಾಗ ನಮ್ಮ ಪಕ್ಕದ ಮನೆಯ ಚಾ.ಸಾ. 1 ರವರು ಮನೆಯಿಂದ ಗಲಾಟೆ ಕೇಳಿಸುತ್ತಿತ್ತು. ಆಗ ನಾನು ಅಲ್ಲಿ ಹೋಗಿ ನೋಡಿದಾಗ ಆರೋಪಿತರು ಚಾ.ಸಾ. 1 ರವರ ಜೊತೆ ಯಾಕೆ ಅವರ ಜಾಗದಲ್ಲಿ ಚಂದ್ರಿಕೆಗಳನ್ನು ನಿಲ್ಲಿಸಿದ್ದೀರಿ ಎಂದು ಕೇಳಿ ಗಲಾಟೆ ಮಾಡುತ್ತಿದ್ದರು ಮತ್ತು ಚಾ.ಸಾ. 1 ರವರಿಗೆ ಅವಾಚ್ಯ

ಶಬ್ದಗಳಿಂದ ಬೈದು 1 ಆರೋಪಿ ಅಲ್ಲೇ ಇದ್ದ ದೊಣ್ಣೆ ಯಿಂದ ಚಾ.ಸಾ. 1 ರವರ ತಲೆಗೆ ಹೊಡೆಯಲು ಹೋದಾಗ ಚಾ.ಸಾ. 1 ರವರು ತಪ್ಪಿಸಿಕೊಂಡಾಗ ಅವರ ಬಲಗೈಗೆ ಪೆಟ್ಟು ಬಿದ್ದು ರಕ್ತಗಾಯವಾಯಿತು. ನಂತರ ನಾನು ಜಗಳ ಬಿಡಿಸಿದಾಗ ಆರೋಪಿತರು ಹೋಗುವಾಗ ಚಾ.ಸಾ. 1 ರವರಿಗೆ ಜೀವ ಬೆದರಿಕೆ ಹಾಕಿದರು ಮತ್ತು ಆ ಬಗ್ಗೆ ನಾನು ಪೋಲಿಸರಿಗೆ ದಿನಾಂಕಃ 21.07.2019 ರಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ದಿನಾಂಕಃ 21.07.2019 ರಂದು ಪೋಲಿಸರಿಗೆ ನೀಡಿದ ಹೇಳಿಕೆಯ ಭಾಗವಾದ '' ದಿನಾಂಕಃ 18.07.2019 --- - - - - - - - - - - - - - ಗಲಾಟೆ ಮಾಡಿರು ವುದು ಸತ್ಯವಾಗಿರುತ್ತದೆ '' ವನ್ನು ಓದಿ ಹೇಳಿದಾಗ ಸಾಕ್ಷಿ ಸದರಿ ಹೇಳಿಕೆಯನ್ನು ಅಲ್ಲಗಳೆದದ್ದರಿಂದ ಅದನ್ನು ನಿ.ಪಿ. 4 ಎಂದು ಗುರುತಿಸಲಾಯಿತು. ನಾನು ನಿ.ಪಿ. 4 ರ ಪ್ರಕಾರ ಹೇಳಿಕೆ ಕೊಟ್ಟಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

ಓ ಹೇ ಕೇ ಸರಿ ಇದೆ,

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಕನಕಪುರ.